

ಹರಿದಾಡುವ, ಹಾರಾಡುವ ಜೀವಿಗಳನ್ನು ಹೊಟ್ಟೆಯೊಳಗೆ ಬಿಟ್ಟುಕೊಳ್ಳುವ ಚೀನಿಯರ ಕ್ರಮ ಜಪಾನಿಯರಿಗ್ಯಾಕೆ ಬಂತು ಎಂದು ಅಚ್ಚರಿಯಾ? ಈ ಕೀಟ, ಅದರ ಲಾರ್ವಾ ಇವೆಲ್ಲ ಆ ರೂಪದಲ್ಲಿರುವ ಕ್ಯಾಂಡಿಗಳು. ಹಣ್ಣಿನ ರಸ, ಕೋಕ್ ಮೊದಲಾದವುಗಳನ್ನು ಸೇರಿಸಿ ಮಾಡಿರುವ 'ಗಮಿಕ್ಸ್' ಮಾರುಕಟ್ಟೆಗೆ ಬಂದಿದ್ದು, ಹಾವು, ಓತಿಕ್ಯಾತದಂಥ ಕ್ಯಾಂಡಿಯನ್ನು ನೀವೂ ಮನೆಯಲ್ಲೇ ಮಾಡಬಹುದು.

ಆಸ್ಟ್ರೇಲಿಯಾದ ಎಸ್ಕೇಪ್ ತಜ್ಞ ಕೊಸೆಂಟಿನೊ. ಮೆಲ್ಬೋರ್ನ್ ಮತ್ಸ್ಯಾಗಾರದೊಳಗೆ 60 ಕೆಜಿ ತೂಕದ ಸಿಮೆಂಟ್ ಬ್ಲಾಕ್‌ಗೆ ಸರಪಳಿ ಹಾಕಿ ಬೀಗ ಹಾಕಿದರೂ ಸೆಕೆಂಡಿನೊಳಗೆ ಪಾರಾಗಿ ಬಂದ ದೃಶ್ಯವಿದು. ಇಂಥವರು ಅಪರಾಧ ಮಾಡಿದಾಗ ಬಂಧಿಸಲು ಪೊಲೀಸರೂ ಹಿಂಜರಿಯುವಂಥ ಪ್ರಸಂಗ.



ನೂಡಲ್ಸ್ ಸೂಪ್ ಬೆಲೆ ಎಷ್ಟಿರಬಹುದು? ಅಬ್ಬಬ್ಬಾ ಎಂದರೆ ಕಪ್‌ಗೆ 10 ಡಾಲರ್. ಆದರೆ ಜಪಾನಿನ ಈ ರೇಮನ್ ನೂಡಲ್ಸ್ ಸೂಪ್ ಬೆಲೆ 100 ಡಾಲರ್. ಒಂದು ಸಣ್ಣ ಕಪ್‌ನಲ್ಲಿರುವ ಇದನ್ನು ಸವಿಯಲು ಬೇಡಿಕೆ ಸಲ್ಲಿಸಿದ ನಂತರ ಮೂರು ದಿನ ಕಾಯಬೇಕಂತೆ. ಇಷ್ಟು ಬೆಲೆ ಇಟ್ಟ ಮಹಾನುಭಾವ ಅಲ್ಲಿಯ ಫ್ಯುಜಿಮುಖಿ ಉಪಾಹಾರಗೃಹದ ಮಾಲೀಕ. 25 ವರ್ಷಗಳ ಪಾಕಾನುಭವವನ್ನು ಈ ಒಂದು ಕಪ್‌ಗೆ ಇಳಿಸಿದ್ದಾನೆ. 25 ಮಸಾಲೆಗಳನ್ನೂ ಬೆರೆಸುತ್ತಾನಂತೆ. ವರ್ಷಗಳು ಉರುಳಿದ ಹಾಗೆ ಮಸಾಲೆ ಪ್ರಮಾಣ, ಬೆಲೆ ಏರಿಕೆಯ ಮೇಲೆ ಮಾಲೀಕನ ಅನುಭವ ಲೆಕ್ಕ ಹಾಕಬಹುದು.

ಪ್ರತಿಭಟನೆಯ ಹೊಸ ಹೊಸ ರೀತಿಗಳು ಆವಿಷ್ಕಾರವಾಗುತ್ತಲೇ ಇವೆ. ಜಾರ್ಜಿಯಾದ ಮಾಜಿ ಅಧ್ಯಕ್ಷರ ಪತ್ನಿ ತನ್ನ ಮಗನ ಬಂಧನ ಪ್ರತಿಭಟಿಸಿ 1993ರಲ್ಲಿ ಮಡಿದ ಪತಿಯ ಸಮಾಧಿಯನ್ನೇ ಅಗೆದಿದ್ದಾಳೆ. ಈ ರೀತಿ ಸಮಾಧಿ ತೋಡಿದ್ದು ಇದು ಐದನೇ ಬಾರಿಯಂತೆ. ಆಕೆ ಮನೆ ಬದಲಾಯಿಸಿದಾಗಲೆಲ್ಲ ಸಮಾಧಿಗೂ ಶಿಫ್ಟ್ ಆಗುವ ಅವಕಾಶ.





ದ.ಕೊರಿಯಾದಲ್ಲಿ ಶೂಗಳ ಭಾರಿ ಪ್ರದರ್ಶನ ನಡೆಯಿತು. ಜನ ಮುಗಿ ಬಿದ್ದು ನೋಡಿದರು. ಖರೀದಿಗೆ ಅವಕಾಶ ಇಲ್ಲ. ಇದೇನು ಹೊಸ ಬ್ರ್ಯಾಂಡ್ ಶೂಗಳಾ? ಅಲ್ಲ, ಮೃತರ ಮನೆಯಲ್ಲಿ ಹೊರಗೆ ಬಿಟ್ಟ ಶೂಗಳನ್ನು ಕದ್ದು ಸೆಕೆಂಡ್‌ಹ್ಯಾಂಡ್ ಶೂ ಮಾರಾಟ ಮಳಿಗೆ ಇಟ್ಟುಕೊಂಡಿದ್ದ ಆ ಕಳ್ಳ. ಮದುವೆ ಛತ್ರ, ದೇವಾಲಯಗಳ ಮುಂದಿರುವ ಶೂ ಕದಿಯುವವರಿಗೆ ಹೊಸ ಐಡಿಯಾ!

ತೈವಾನಿನಲ್ಲಿ 'ಹುಲಿ ವರ್ಷ' ಆರಂಭವಾಗಿದ್ದೇ ಆಗಿದ್ದು ಸರ್ಕಾರ ಅಲ್ಲಿಯ ದಂಪತಿಗಳಿಗೆ ಹೆಚ್ಚೆಚ್ಚು ಮಕ್ಕಳನ್ನು ಪಡೆಯುವಂತೆ ಉಪದೇಶ ಮಾಡುತ್ತಿದೆ, ಏನೆಲ್ಲಾ ಆಮಿಷ ಒಡ್ಡುತ್ತಿದೆ. ಹುಲಿ ವರ್ಷದಲ್ಲಿ ಹುಟ್ಟುವ ಮಕ್ಕಳು ಸಂಬಂಧಿಕರಿಗೆ ಕೇಡುಂಟು ಮಾಡುತ್ತಾರೆ ಎಂದು ನಂಬಿದ ಮಂದಿ ಬೇಗ ಮನೆ ಮುಟ್ಟದರೆ ಎಲ್ಲಿ ಹುಲಿ ಮರಿ ಹುಟ್ಟಿಬಿಡುತ್ತದೋ ಎಂದು ಹೆದರಿ ಕಚೇರಿಯಲ್ಲೇ ಓವರ್‌ಟೈಂ ಮಾಡಿಕೊಂಡು ಕೂರುತ್ತಾರಂತೆ.

ಹೈಟಿಯಲ್ಲಿ ಭೂಕಂಪದಿಂದ ಏನೆಲ್ಲಾ ಅವಸ್ಥೆ ಅನುಭವಿಸುತ್ತಿದ್ದಾರೆ ಅಲ್ಲಿಯ ಜನ. ಎಲ್ಲಾ ಕಡೆ ಲೂಟಿ, ಹಲ್ಲೆ. ಆದರೆ ಈ ಹೈದನ ಅದೃಷ್ಟ ಕೆಟ್ಟಿತ್ತು. ಎಲೆಕ್ಟ್ರಾನಿಕ್ಸ್ ಅಂಗಡಿಗೆ ಕನ್ನ ಹಾಕುವಾಗಲೇ ಛಾಯಾಗ್ರಾಹಕರ ಕ್ಯಾಮೆರಾ ಕಣ್ಣಿಗೆ ಸಿಕ್ಕಿಬಿದ್ದಿದ್ದ. ನಂತರ ಪೊಲೀಸರು ಬಂದರು.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65